(148)

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 62 ಎಂಆರ್‌ಆರ್ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, .
ಬೆಂಗಳೂರು, ದಿನಾಂಕ: 27.07.2005

ಸುತ್ತೋಲೆ

ವಿಷಯ: ಸರ್ಕಾರದ ವಿವಿಧ ಇಲಾಖೆಗಳ ಬಳಕೆಗಾಗಿ ಉಚಿತ ಕಂಪ್ಯೂಟರ್ ಪಹಣಿ ನೀಡುವ ಬಗ್ಗೆ.

ಉಲ್ಲೇಖ:(1) ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರ ಪತ್ರ ನಂ.ಸಿಬ್ಬಂದಿ.15/05-06 ದಿನಾಂಕ:9-6-2005.
(2) ಸುತ್ತೋಲೆ ನಂ ಆರ್‌ಡಿ 62 ಎಂಆರ್‌ಆರ್ 2000 ದಿನಾಂಕ:19-04-2001, 15-10-2001 ಮತ್ತು 04-12-2001

ಮೇಲ್ಕಂಡ ಸುತ್ತೋಲೆಗಳಲ್ಲಿ ಭೂಮಿ ಯೋಜನೆಯಲ್ಲಿ ಸ್ಥಾಪಿಸಲಾದ ಎಲ್ ಆರ್ ಕಿಯೋಸ್ಕ್ ಗಳಿಂದ ಗಣಕೀಕೃತ ಪಹಣಿಗಳನ್ನು ವಿತರಿಸುವಾಗ ರೂಪಾಯಿ 15-00 ರ ಬಳಕೆ ಶುಲ್ಕವನ್ನು ಪಡೆಯುವ ಬಗ್ಗೆ ಸ್ಪಷ್ಟಪಡಿಸಲಾಗಿದೆ. ಅದರಂತೆಯೇ, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳು, ವಿಶೇಷ ಜಿಲ್ಲಾಧಿಕಾರಿಗಳು, ತಹಸೀಲ್ದಾರರು ಮತ್ತು ವಿಶೇಷ ತಹಸೀಲ್ದಾರರ ಕಛೇರಿಯಂತಹ ಕಂದಾಯ ಇಲಾಖೆಯ ವಿವಿಧ ಕಛೇರಿಗಳ ಸರ್ಕಾರಿ ಉದ್ದೇಶದ ಬಳಕೆಗಾಗಿ ಹಾಗೂ ಶಿರಸ್ತೇದಾರರು ಮತ್ತು ಗ್ರಾಮಲೆಕ್ಕಿಗರ ಅಧಿಕೃತ ಬಳಕೆಗಾಗಿ ನೀಡಲಾಗುವ ಪಹಣಿಗಳಿಗೆ ಬಳಕೆದಾರರ ಶುಲ್ಕ ಪಾವತಿಗೆ ಒತ್ತಾಯಿಸಬಾರದೆಂದು ತಿಳಿಸಲಾಗಿದೆ.

ಕೆಲವೊಮ್ಮೆ ವಿವಿಧ ಇಲಾಖೆಗಳ ಅನೇಕ ಅಧಿಕಾರಿಗಳು ಸರ್ಕಾರದ ಬಳಕೆಯ ಉದ್ದೇಶಕ್ಕಾಗಿ ಪಹಣಿಗಳನ್ನು ಉಚಿತವಾಗಿ ಪೂರೈಸಲು ಕೋರುತ್ತಿದ್ದಾರೆ. ಅದರಂತೆಯೇ, ವಿಶೇಷ ಭೂ ಸ್ವಾಧಿನ ಅಧಿಕಾರಿಗಳು ಸಹ ಉಚಿತವಾಗಿ ಪಹಣಿ ಪೂರೈಸಲು ಕೋರುತ್ತಿದ್ದಾರೆ. ಭೂ ಸ್ವಾಧೀನ ಪ್ರಕರಣಗಳಲ್ಲಿ ನಿಯಮಾನುಸಾರ ಠೇವಣಿಯನ್ನು ಕಟ್ಟಿಸಿಕೊಳ್ಳಲಾಗುತ್ತದೆಯಾದುದರಿಂದ, ಸದರಿ ಠೇವಣಿ ಮೊಬಲಗಿನಲ್ಲಿ ಅಗತ್ಯವಿರುವ ಸಂಖ್ಯೆಯ ಪಹಣಿಗಳನ್ನು ಬಳಕೆದಾರರ ಶುಲ್ಕ ಪಾವತಿಸಿ ಪಡೆಯಬಹುದೆಂದು ತಿಳಿಸಲಾಗಿದೆ.

ಭೂಮಿ ಯೋಜನೆಯು ಸರ್ಕಾರದ ವತಿಯಿಂದ ಯಾವುದೇ ಅನುದಾನ ಅಥವಾ ಸಹಾಯಧನವಿಲ್ಲದೆ ನಿರ್ವಹಿಸಲ್ಪಡುತ್ತಿರುವ ಪ್ರಯುಕ್ತ ಯೋಜನೆಯ ನಿರ್ವಹಣೆಗೆ ಬಳಕೆದಾರರ ಶುಲ್ಕವೇ ಮೂಲ ಆದಾಯವಾಗಿರುತ್ತದೆ. ಆದುದರಿಂದ, ಉಲ್ಲೇಖಿತ ಸುತ್ತೋಲೆ ದಿನಾಂಕ 4.12.2001 ರಲ್ಲಿ ತಿಳಿಸಿರುವ ಆಯ್ದ ಇಲಾಖೆಗಳ ಹೊರತು ಪಡಿಸಿ ಇನ್ನಿತರ ಇಲಾಖೆಗಳ ಬಳಕೆಗಾಗಿ ಪಹಣಿಯನ್ನು ಉಚಿತವಾಗಿ ನೀಡಲು ಸಾಧ್ಯವಾಗುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

ಈ ಸುತ್ತೋಲೆಯು ಕಂದಾಯ ಇಲಾಖೆಯ ಇಂಟರ್‌ನೆಟ್ ಸೈಟ್ http://www.bhoomi.kar.nic.in ನಲ್ಲೂ ಲಭ್ಯವಿದೆ.

ಜಿಲ್ಲಾಧಿಕಾರಿಗಳವರ ಕಛೇರಿ
ಹಾಸನ ಜಿಲ್ಲೆ, ಹಾಸನ.
ದಿನಾಂಕ ..........................

(ರಾಜೀವ್ ಚಾವ್ಲಾ)
ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ಎಲ್ಲಾ ಜಿಲ್ಲಾಧಿಕಾರಿಗಳು ನಂ. ಆರ್. ಆರ್. ಸಿ (ಭೂಮಿ) 28/05-06.
ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ